**PW-1**

<u>ದಿಃ 30.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಖ್ಯ ವಿಚಾರಣೆ : ವಾದಿ ಪರ ಶ್ರೀ. **SGH** ವಕೀಲರಿಂದ:</u>

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದ್ದು , ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯದಿಂದ ಕೂಡಿದ್ದು ಅದನ್ನು ನನ್ನ ಸೂಚನೆಯ ಮೇರೆಗೆ ತಯಾರಿಸಲಾಗಿರುತ್ತದೆ ಮತ್ತು ಅದನ್ನು ನಾನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ನಾನು ನ್ಯಾಯಾಲಯಕ್ಕೆ ನನ್ನ ಪರವಾಗಿ ದಾಖಲಾತಿಗಳನ್ನು ಸಲ್ಲಿಸಿರುತ್ತೇನೆ. ಅವುಗಳನ್ನು ನನ್ನ ಪರವಾಗಿ ಗುರುತಿಸಲು ಪ್ರಾರ್ಥನೆ.

ಅಣಕಲಗಾ ಗ್ರಾಮದ ಜಮೀನು ಸರ್ವೆ ನಂ. 95/3 ಅ ಕ್ಕೆ ಸಂಬಂಧಿಸಿದ 2008-2009 ನೇ ಸಾಲಿನ ಒಂದು ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-**1** ಎಂದು ಗುರುತಿಸಲಾಯಿತು.

ಒಂದು ಮುಟೇಷನ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 2 ಎಂದು ಗುರುತಿಸಲಾಯಿತು.

ಸರ್ವೆ ನಂ. 95/5 ರ 2023-2024 ನೇ ಸಾಲಿನ ಒಂದು ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-**3** ಎಂದು ಗುರುತಿಸಲಾಯಿತು.

ಸರ್ವೆ ನಂ. 95/13 ರ 2023-2024 ನೇ ಸಾಲಿನ ಒಂದು ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-**4** ಎಂದು ಗುರುತಿಸಲಾಯಿತು.

ಆಸ್ತಿ ಸಂಖ್ಯೇ 3-48 ರ ನಮೂನೆ 12 ನ್ನು ಹಾಜರುಪಡಿಸಿದ್ದು ನಿಪಿ 5 ಎಂದು ಗುರುತಿಸಲಾಯಿತು.

ಆಸ್ತಿ ಸಂಖ್ಯೇ 3-48/1 ರ ನಮೂನೆ 12 ನ್ನು ಹಾಜರುಪಡಿಸಿದ್ದು ನಿಪಿ 6 ಎಂದು ಮತ್ತು ಆಸ್ತಿ ಸಂಖ್ಯೇ 3-48/2 ರ ನಮೂನೆ 12 ನ್ನು ಹಾಜರುಪಡಿಸಿದ್ದು ನಿಪಿ 7 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ. **ASJ** ವಕೀಲರಿಂದ: ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಪಾಟೀ ಸವಾಲಿಗೆ ಸಮಯ ನೀಡಲಾಯಿತು.</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ ದಂಡಾಧಿಕಾರಿಗಳು
ಅಫಜಲಪೂರ